# ಜಕಾರ್ತದಲ್ಲಿ ಜಗಮಗಿಸಿದ ತಾರೆಗಳು



ಹಿಮಾ ದಾಸ್

**ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಹದಿಹರೆಯದ ಮಿಂಚು ಜಗತ್ತಿನ ಕಣ್ಣು ಕೋರೈಸಿದೆ. ಅದರಲ್ಲೂ ಐವರು ಮಹಿಳೆಯರ ಸಾಧನೆಗಳು ಅನುಪಮ.**

■ ಗಿರೀಶ ದೊಡ್ಡಮನಿ

ಇಂಡೊನೇಷ್ಯಾದ ಜಕಾರ್ತದಲ್ಲಿ ಈಚೆಗೆ ನಡೆದ 18ನೇ ಏಷ್ಯನ್ ಕ್ರೀಡಾಕೂಟದಲ್ಲಿ ದೇಶ ನಿಬ್ಬೆರಗಾಗುವಂತೆ ಮಾಡಿದ್ದು ಹದಿಹರೆಯದ ವಯಸ್ಸಿನ ಪ್ರತಿಭಾವಂತರೇ. ಇವರಲ್ಲಿ ಅಸಾಧಾರಣ ಸಾಧನೆ ಮಾಡಿದ ಐವರು ಮಹಿಳಾ ಕ್ರೀಡಾಪಟುಗಳೂ ಸೇರಿದ್ದಾರೆ.

18ರ ಹರೆಯದ ಹಿಮಾ ದಾಸ್, 19 ವರ್ಷದ ಮಲಪ್ರಭಾ ಜಾಧವ್, 21 ವರ್ಷದ ಸ್ವಪ್ನಾ ಬರ್ಮನ್, 22 ವರ್ಷದ ದ್ಯುತಿ ಚಾಂದ್ ಮತ್ತು 27 ವರ್ಷದ ರಾಹಿ ಸರ್ನೋಬತ್ ಅವರು ಗೆದ್ದ ಪದಕಗಳು ಭಾರತದ ಕ್ರೀಡೆಯ ಭವಿಷ್ಯದ ಬಗ್ಗೆ ಅಪಾರ ಭರವಸೆಯನ್ನು ಹುಟ್ಟಿಸಿವೆ. ಈ ಕ್ರೀಡಾಸಾಧಕರು ಬೆಳೆದು ಬಂದ ನೆಲೆ, ವಾತಾವರಣ, ಸಂಸ್ಕೃತಿಗಳು ವಿಭಿನ್ನ. ಎದುರಿಸಿದ ಸವಾಲುಗಳೂ ವಿಭಿನ್ನ. ಇವರನ್ನೆಲ್ಲ ಒಂದೇ ಸೂರಿನಡಿ ನಿಲ್ಲಿಸಿ ವಿಜಯ ವೇದಿಕೆ ಹತ್ತುವಂತೆ ಮಾಡಿದ್ದು ಕ್ರೀಡೆ.

## ಬಿರುಗಾಳಿ ವೇಗದ ಹಿಮಾ

ಜಕಾರ್ತ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಬೇಟನ್ ಹಿಡಿದು ಬಿರುಗಾಳಿಯಂತೆ ಓಡುತ್ತಿದ್ದ ಹಿಮಾ ದಾಸ್ 4X400 ಮೀಟರ್ಸ್ ರಿಲೆಯ ಮೊದಲ ಲ್ಯಾಪ್‌ನಲ್ಲಿಯೇ ತಮ್ಮ ಪ್ರತಿಸ್ಪರ್ಧಿಗಳಿಗಿಂತ 25 ಮೀಟರ್ಸ್ ಹೆಚ್ಚು ಅಂತರವನ್ನು ಮುಂದಿನವರಿಗೆ ಒದಗಿಸಿ ಕೊಡದಿದ್ದರೆ ಚಿನ್ನದ ಸಂಭ್ರಮ ಸಾಧ್ಯವಾಗುತ್ತಿರಲಿಲ್ಲ. ಆದರೆ ಈ 18 ವರ್ಷದ ಹುಡುಗಿಯ ಕಾಲುಗಳಿಗೆ ಈ ರೀತಿಯ ಶಕ್ತಿ ಬಂದಿದ್ದು ಹೇಗೆ ಗೊತ್ತಾ?

ಯಾವುದೇ ಆಧುನಿಕ ಪೋಷಾಂಕಾಂಶ ಔಷಧಿ, ಪುಡಿಗಳ ಪರಿಚಯವೇ ಇಲ್ಲದ ಹಳ್ಳಿ ಧಿಂಗ್. ಇದು ಅಸ್ಸಾಂ ರಾಜ್ಯದ ನಾಗಾಂವ್ ಜಿಲ್ಲೆಯಲ್ಲಿದೆ. ಭತ್ತದ ಕೃಷಿಯೇ ಇಲ್ಲಿಯ ಪ್ರಮುಖ ಕಸುಬು. ಆಟಕ್ಕಾಗಿ ಯಾವುದೇ ವಿಶೇಷ ಸೌಲಭ್ಯಗಳಿಲ್ಲ. ಇಲ್ಲಿಯ ರಂಜಿತ್ ದಾಸ್ ಮತ್ತು ಜೊನಿಲಾ ದಂಪತಿಯದ್ದು ಸಣ್ಣ ಭೂಮಿಯಲ್ಲಿ ಭತ್ತ ಬೆಳೆಯುವ ಕಾಯಕ. 16 ಜನರು ಇರುವ ಕೂಡು ಕುಟುಂಬ ಅದು. ಹೊಟ್ಟೆ, ಬಟ್ಟೆಗೆ ಸಾಕಾಗುಷ್ಟು ಆದಾಯ ಸಿಗುತ್ತಿತ್ತು.

ಹಿಮಾ 6–7 ವರ್ಷದವಳಿದ್ದಾಗಲೇ ಭತ್ತದ ಗದ್ದೆಯ ಬದುಗಳ ಮೇಲೆ ಬರಿಗಾಲಿನಲ್ಲಿ ಜಿಂಕೆಯಂತೆ ಓಡುತ್ತಿದ್ದಳೆಂದು ಅವರ ಅಪ್ಪ ಹೇಳುತ್ತಾರೆ. ನಾಗಾಂವ್‌ನ ಶಾಲೆಯಲ್ಲಿ ಕಲಿಯುವಾಗ ಹಿಮಾ ಅಥ್ಲೆಟಿಕ್ಸ್‌ನಲ್ಲಿ ಇರಲಿಲ್ಲ. ಆದರೆ ಹುಡುಗರ ತಂಡದಲ್ಲಿ ಫುಟ್‌ಬಾಲ್ ಆಡುತ್ತಿದ್ದಳು. ಭಾರತ ಮಹಿಳೆಯರ ತಂಡದಲ್ಲಿ ಆಡುವ  ಕನಸು ಕಂಡ ಹುಡುಗಿ ಆಕೆ. ಆದರೆ 2016ರ ಒಂದು ಕ್ರೀಡಾಕೂಟದ ಸಂದರ್ಭದಲ್ಲಿ ಆಕೆಯ ವೇಗವನ್ನು


ಸ್ವಪ್ನಾ ಬರ್ಮನ್


ರಾಹಿ

ಗುರುತಿಸಿದ ಕೋಚ್ ನಿಪೊನ್ ದಾಸ್ ಗುವಾಹಟಿಯ ಕ್ರೀಡಾ ವಸತಿ ನಿಲಯಕ್ಕೆ ಸೇರಿಸಿದ್ದರು. ಆಮೇಲೆ 400 ಮೀ ಓಟದಲ್ಲಿ ಹಿಮಾ ಬೇಗನೆ ಹೆಜ್ಜೆ ಗುರುತು ಮೂಡಿಸಿದರು. ಮೂರು ತಿಂಗಳುಗಳ ಹಿಂದಷ್ಟೇ ಫಿನ್ಲೆಂಡ್‌ನಲ್ಲಿ ನಡೆದಿದ್ದ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ನ ಮಹಿಳೆಯರ 400 ಮೀಟರ್ಸ್ ಓಟದಲ್ಲಿ ಹಿಮಾ ಚಿನ್ನ ಗೆದ್ದಾಗ ಭಾರತದಲ್ಲಿ ಸಂಚಲನ ಮೂಡಿತ್ತು. ಸಾಧಾರಣ ಗುಣಮಟ್ಟದ ಸ್ಪೈಕ್ ಶೂಗಳನ್ನು ಧರಿಸಿಕೊಂಡು ಅವರು ಈ ಸಾಧನೆ ಮಾಡಿದ್ದರು. ಇದೀಗ ಏಷ್ಯನ್ ಗೇಮ್ಸ್‌ನ ಮಹಿಳೆಯರ 4X400 ಮೀ ರಿಲೆಯಲ್ಲಿ ಚಿನ್ನ ಮತ್ತು ಮಿಶ್ರ ರಿಲೆಯಲ್ಲಿ ಬೆಳ್ಳಿ ಪದಕದ ಸಾಧನೆಗೆ ಹಿಮಾ ಕಾರಣರಾಗಿದ್ದಾರೆ. ಅವರ ಸಾಧನೆಗೆ ಮೆಚ್ಚುಗೆ, ಪುರಸ್ಕಾರಗಳು ದಂಡಿಯಾಗಿ ಬರುತ್ತಿವೆ. ಛಲ, ಪರಿಶ್ರಮದಿಂದಲೇ ದೇಶಕ್ಕೆ ಪದಕ ಗೆದ್ದುಕೊಟ್ಟ ಹುಡುಗಿ ಈಗ ಕೋಟ್ಯಧೀಶೆಯಾಗುವತ್ತ ಹೆಜ್ಜೆಯಿಟ್ಟಿದ್ದಾರೆ!

## ಪ್ರವಾಹದ ವಿರುದ್ಧ ಈಜಿದ ಸ್ವಪ್ನಾ

ಹೆಪ್ಟಥ್ಲಾನ್ ಸ್ಪರ್ಧೆಯು ಭಾರತದ ಅಥ್ಲೀಟ್‌ಗಳ ಪಾಲಿಗೆ ಕಡುಕಷ್ಟದ್ದು. ಟ್ರ್ಯಾಕ್ ಆ್ಯಂಡ್ ಫೀಲ್ಡ್‌ನ ಎಂಟು ಸ್ಪರ್ಧೆಗಳು ಇದರಲ್ಲಿ ಅಡಕವಾಗಿರುತ್ತವೆ.



ವಿನ್ಯಾಸ: ದಿಲ್